ಕರ್ನಾಟಕ ಪರೀಕ್ಷಾ ಪ್ರಾಧಿಕಾರ
Karnataka Examinations Authority

ಸಂಖ್ಯೆ. ಇಡಿ/ಕೆಇಎ/ಆಡಳಿತ/ಸಿಆರ್–15/2022–23 ದಿನಾಂಕ. 22.03.2024

## ಪ್ರಕಟಣೆ

ಕೆಎಸ್‌ಇಡಿಸಿ/ಕೆಎಫ್‌ಸಿಎಸ್‌ಸಿ/ಕೆಬಿಸಿಡಬ್ಲ್ಯುಬಿ/ಎಂಎಸ್‌ಐಎಲ್ 2023 ಸಂಬಂಧಿಸಿದಂತೆ ನಡೆದ ಪರೀಕ್ಷೆಗಳ ಪರಿಷ್ಕೃತ ಅಂಕಪಟ್ಟಿಯನ್ನು ಬಿಡುಗಡೆ ಮಾಡಲಾಗಿದೆ. ಒಂದೇ ಹುದ್ದೆಗೆ ಒಂದಕ್ಕಿಂತ ಹೆಚ್ಚು ಅರ್ಜಿಗಳನ್ನು ಸಲ್ಲಿಸಿದ್ದ ಅಭ್ಯರ್ಥಿಗಳಿಗೆ ತಮ್ಮ ಉಳಿದ ಪ್ರವೇಶ ಪತ್ರಗಳನ್ನು ಪರೀಕ್ಷೆ ಬರೆದ ಕೇಂದ್ರದಲ್ಲಿ ಸಲ್ಲಿಸಬೇಕೆಂದು ಸೂಚಿಸಲಾಗಿತ್ತು. ಆದರೂ ಅನೇಕ ಅಭ್ಯರ್ಥಿಗಳು ತಮ್ಮ ಪ್ರವೇಶ ಪತ್ರಗಳನ್ನು ಪರೀಕ್ಷಾ ಕೇಂದ್ರದಲ್ಲಿ ಸಲ್ಲಿಸಿರುವುದಿಲ್ಲ. ದಿನಾಂಕ. 07.03.2024ರಂದು ತಾತ್ಕಾಲಿಕ ಅಂಕಪಟ್ಟಿಯನ್ನು ಬಿಡುಗಡೆ ಮಾಡಿ, ಯಾವುದಾರು ಅಭ್ಯರ್ಥಿಯ ವಿಷಯವಾರು ಫಲಿತಾಂಶ ಕಾಣದಿದ್ದಲ್ಲಿ ನೀಡಲಾಗಿದ್ದ ಲಿಂಕ್ ಮೂಲಕ ಸಂಪೂರ್ಣ ಮಾಹಿತಿಯನ್ನು ಅಪ್‌ಲೋಡ್ ಮಾಡಬೇಕೆಂದು ತಿಳಿಸಲಾಗಿತ್ತು. ಆದರೂ ಬಹಳಷ್ಟು ಅಭ್ಯರ್ಥಿಗಳು ಯಾವುದೇ ಮಾಹಿತಿಯನ್ನು ಸಲ್ಲಿಸಿರುವುದಿಲ್ಲ.

ಮೇಲಿನ ಅಂಶಗಳ ಹಿನ್ನಲೆಯಲ್ಲಿ ಈ ಕೆಳಗಿನ **KSEDC/KFCSC/KBCWWB/MSIL-2023 Provisional Score with Objection** .ಲಿಂಕ್‌ನಲ್ಲಿ ಅಭ್ಯರ್ಥಿಗಳು ಆಕ್ಷೇಪಣೆಗಳನ್ನು ಸಲ್ಲಿಸಬಹುದು. ಲಿಂಕ್‌ನಲ್ಲಿ ಅರ್ಜಿ ಸಂಖ್ಯೆ. ಅರ್ಜಿ ದಾರರ ಹೆಸರು, ಜನ್ಮ ದಿನಾಂಕ ನಮೂದಿಸಿದ ನಂತರ ಈಗಾಗಲೇ ನೊಂದಣಿ ಮಾಡಿರುವ ಮತ್ತು ಅಂಕಗಳು ಪ್ರಕಟವಾಗಿರುವ ಅಭ್ಯರ್ಥಿಗಳು **Login for Registered Applicant** ಬಟನ್ ಕ್ಲಿಕ್ ಮಾಡುವುದು

1. **Login for Registered Applicant** ಬಟನ್ ಕ್ಲಿಕ್ ಮಾಡಿದ ನಂತರ ಅಭ್ಯರ್ಥಿಯು ತಮ್ಮ ಪರಿಷ್ಕೃತ ಅಂಕಗಳನ್ನು ನೋಡಬಹುದು. ಯಾವುದೇ ವಿಷಯದ ಸ್ಕೋರ್ ತಪ್ಪಾಗಿದ್ದರೆ / ನವೀಕರಿಸುವ ಅಗತ್ಯವಿದೆ ಈ ಕೆಳಗಿನ ಕ್ರಮಗಳನ್ನು ವಹಿಸಿ ಆಕ್ಷೇಪಣೆಗಳನ್ನು ಸಲ್ಲಿಸುವುದು:

    - ಆಕ್ಷೇಪಣೆ ಇರುವ ವಿಷಯವನ್ನು ಆಯ್ಕೆ ಮಾಡಿದ ಕೂಡಲೇ ರಿಜಿಸ್ಟರ್ ಸಂಖ್ಯೆ, ಪ್ರಶ್ನೆ ಪತ್ರಿಕೆ ವರ್ಷನ್ ಕೋಡ್ ಮತ್ತು ಅಂಕಗಳನ್ನು ನೋಡಬಹುದು. ಅಭ್ಯರ್ಥಿಯ ಪ್ರಕಾರ ತಮಗೆ ಲಭಿಸಬೇಕಾಗಿರುವ ಅಂಕಗಳನ್ನು ನಮೂದು ಮಾಡಿ, ಪ್ರವೇಶ ಪತ್ರ ಮತ್ತು ಓಎಂಆರ್ ಪ್ರತಿಯನ್ನು ಒಂದೇ ಪಿಡಿಎಫ್‌ನಲ್ಲಿ ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡುವುದು.

18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012
18th Cross, Sampige Road, Malleshwaram, Bengaluru - 560 012.
Phone: 080 - 23 564 583, 23 460 460, 23 361 786, Fax: 080 - 23 461 576
e-mail : keauthority-ka@nic.in Website : http://kea.kar.nic.in

2. **Candidates not yet received results /ಇನ್ನು ಫಲಿತಾಂಶ ಪ್ರಕಟವಾಗದ ಅಭ್ಯರ್ಥಿಗಳು:** ಅಂಕಗಳು ಪ್ರಕಟವಾಗದಿರುವ ಅಭ್ಯರ್ಥಿಗಳು **Candidates not yet received results /ಇನ್ನು ಫಲಿತಾಂಶ ಪ್ರಕಟವಾಗದ ಅಭ್ಯರ್ಥಿಗಳು** ಅನ್ನು ಕ್ಲಿಕ್ ಮಾಡಿ ಆಕ್ಷೇಪಣೆಗಳನ್ನು ಈ ಕೆಳಗಿನ ಕ್ರಮಗಳನ್ನು ವಹಿಸಿ ಸಲ್ಲಿಸಬಹುದು.
    - ಫಲಿತಾಂಶ ಪ್ರಕಟವಾಗದೇ ಇರುವ ಇಲಾಖೆ, ಹುದ್ದೆ, ವಿಷಯ ಆಯ್ಕೆ ಮಾಡಿ ನಂತರ ತಮ್ಮ ಅರ್ಜಿ ಸಂಖ್ಯೆ, ಹೆಸರು, ರಿಜಿಸ್ಟರ್ ಸಂಖ್ಯೆಯನ್ನು, ಪ್ರಶ್ನೆ ಪತ್ರಿಕೆ ವರ್ಷನ್ ಕೋಡ್ ಅನ್ನು ನಮೂದಿಸಬೇಕು.
    - ತದನಂತರ ಆಕ್ಷೇಪಣೆಗೆ ಇರುವ ಕಾರಣವನ್ನು ನಮೂದಿಸಿ, ಪ್ರವೇಶ ಪತ್ರ ಮತ್ತು ಓಎಂಆರ್ ಪ್ರತಿಯನ್ನು ಒಂದೇ ಪಿಡಿಎಫ್‌ನಲ್ಲಿ ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡುವುದು.

**ಲಿಂಕ್‌ನಲ್ಲಿ ಆಕ್ಷೇಪಣೆಗಳನ್ನು ದಿನಾಂಕ. 22.03.2024 ರಿಂದ 29.03.2024ರ (ಸಂಜೆ 5.30 ವರೆಗೂ) ಸಲ್ಲಿಸಬಹುದು.**

**ವಿಶೇಷ ಸೂಚನೆ:** ಆಕ್ಷೇಪಣೆಗಳನ್ನು ಈ ಮೇಲೆ ತಿಳಿಸಿರುವ ಲಿಂಕ್‌ನಲ್ಲಿ ಮಾತ್ರ ಕಡ್ಡಾಯವಾಗಿ ಆಕ್ಷೇಪಣೆಗಳನ್ನು ಸಲ್ಲಿಸುವುದು. ಇನ್ನಿತರೆ ವಿಧದ ಇ-ಮೇಲ್/ ಅಂಚೆ ಅಥವಾ ಖುದ್ದಾಗಿ ಆಕ್ಷೇಪಣೆಗಳನ್ನು ಸಲ್ಲಿಸಿದ್ದಲ್ಲಿ, ಅವುಗಳನ್ನು ಪರಿಗಣಿಸಲಾಗುವುದಿಲ್ಲ.

ಕಾರ್ಯನಿರ್ವಾಹಕ ನಿರ್ದೇಶಕರು